ಇ) ರಾಜ್ಯದ ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಕಾರ್ಡುದಾರರಿಗೆ ಪ್ರತಿ ಮಾಹೆ ವಿತರಿಸಲಾಗುತ್ತಿರುವ ಅಕ್ಕಿಯ ಪ್ರಮಾಣ 1,67,352 ಮೆ.ಟನ್.

ನೆಲಮಂಗಲ ವಿಧಾನಸಭಾ ಕ್ಷೇತ್ರಕ್ಕೆ ಪ್ರತಿ ಮಾಹೆಗೆ 48701 ಬಿಪಿಎಲ್ ಪಡಿತರ ಚೀಟಿಗಳಿಗೆ ವಿತರಿಸಲು ಬೇಕಾದ ಅಕ್ಕಿಯ ಪ್ರಮಾಣ 715.992 ಮೆ.ಟನ್. ಆಗಿರುತ್ತದೆ.

ಸರ್ವೀಸ್ ರಸ್ತೆ ಮುಖಾಂತರ ವಾಹನ ಸಂಚಾರ

520(1120); ಡಾ॥ ಕೆ. ಶ್ರೀನಿವಾಸಮೂರ್ತಿ

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ತುಮಕೂರು ಕಡೆಗೆ NH4 ಹಾಗೂ ಹಾಸನ ಕಡೆಗೆ NH48 ಎರಡೂ ರಸ್ತೆಗಳು ಹಾದು ಹೋಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲಿ, ನೆಲಮಂಗಲ–ದಾಬಸ್‌ಪೇಟೆ ಎರಡು ಕಡೆಗಳಲ್ಲಿ ಮೇಲುಸೇತುವೆ ನಿರ್ಮಾಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಎರಡು ಬಸ್ ನಿಲ್ದಾಣಗಳಲ್ಲಿ ಸರ್ವಿಸ್ ರಸ್ತೆ ಮುಖಾಂತರ ಕೆಲವು ವಾಹನಗಳು ಸಂಚರಿಸದಿರುವುದರಿಂದ ವಿದ್ಯಾರ್ಥಿಗಳು, ನೌಕರರುಗಳು ಹಾಗೂ ಸಾರ್ವಜನಿಕರುಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಇನ್ನು ಮುಂದೆ ಸರ್ವಿಸ್ ರಸ್ತೆ ಮುಖಾಂತರ ಸಂಚರಿಸುವಂತೆ ಸಂಬಂಧಪಟ್ಟವರಿಗೆ ಕಟ್ಟುನಿಟ್ಟಿನ ಆದೇಶ ನೀಡಲಾಗುತ್ತದೆಯೇ?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಬಂದಿರುತ್ತದೆ.

ಆ) ಬಂದಿರುತ್ತದೆ.

ಇ) ಬಂದಿರುತ್ತದೆ.

ನೆಲಮಂಗಲದ ಬಳಿ ಟೋಲ್ ರಸ್ತೆ ಪ್ರಾರಂಭವಾದ ಕೂಡಲೇ ಸುತ್ತೋಲೆ–1071/2011ನ್ನು ಹೊರಡಿಸಿ ನಿಗಮದ ಎಲ್ಲಾ ಪ್ರತಿಷ್ಠಿತ ಸಾರಿಗೆಗಳನ್ನು ಹಾಗೂ ಬೆಂಗಳೂರು–ತುಮಕೂರು ಮಾರ್ಗದ ತಡೆರಹಿತ/ನಿರ್ವಾಹಕರಹಿತ ವೇಗದೂತ ಸಾರಿಗೆಗಳನ್ನು ಸಂಪೂರ್ಣವಾಗಿ ಟೋಲ್ ರಸ್ತೆಯ ಮುಖಾಂತರ ಕಾರ್ಯಚರಿಸಲು ಹಾಗೂ ಉಳಿದಂತೆ ವೇಗದೂತ ಸಾರಿಗೆಗಳನ್ನು ಬೆಂಗಳೂರಿನಿಂದ ತುಮಕೂರು/ಕುಣಿಗಲ್ ಕಡೆಗೆ ಕಾರ್ಯಾಚರಣೆ ಮಾಡುವಾಗ 8ನೇ ಮೈಲಿ ಕಲ್ಲಿನವರೆಗೆ ಕಡ್ಡಾಯವಾಗಿ ಸರ್ವಿಸ್ ರಸ್ತೆಯಲ್ಲಿ ಸಂಚರಿಸಿ ನಂತರ ಟೋಲ್ ರಸ್ತೆಯ ಮೂಲಕ ನೆಲಮಂಗಲ ಘಟಕದವರೆಗೆ ಚಲಿಸಿ, ಘಟಕದ ಬಳಿ ಸರ್ವಿಸ್ ರೋಡ್ ಲಿಂಕ್ ರಸ್ತೆಯ ಮೂಲಕ ಸರ್ವಿಸ್ ರಸ್ತೆ ಪ್ರವೇಶಿಸಿ ನೆಲಮಂಗಲ ಸಂಚಾರ ಬಿಂದುವಿನ ಹತ್ತಿರ ಪ್ರಯಾಣಿಕರನ್ನು ಹತ್ತಿಸಿಕೊಂಡು ಕಾರ್ಯಾಚರಿಸಲು ಆದೇಶಿಸಲಾಗಿದೆ.

ನೆಲಮಂಗಲ ಘಟಕದ ಬಳಿ ಇಬ್ಬರು ಸಂಚಾರ ನಿಯಂತ್ರಕರನ್ನು ನಿಯೋಜಿಸಿ ಚಾಲನಾ ಸಿಬ್ಬಂದಿಗೆ ಸೂಕ್ತ ಮಾರ್ಗದರ್ಶನ ನೀಡಲಾಗಿದೆ ಹಾಗೂ ರಾಮನಗರ ಮತ್ತು ತುಮಕೂರು ವಿಭಾಗಗಳಿಂದ ತನಿಖಾ ತಂಡಗಳನ್ನು ನಿಯೋಜಿಸಿ, ಮೇಲು ಸೇತುವೆ ಮೇಲೆ ಹೋಗುವ ಚಾಲಕರಿಗೆ ಮೆಮೋ ನೀಡಲು ಕ್ರಮ ಕೈಗೊಳ್ಳಲಾಗಿದೆ.

ನಂತರ ಬಂದ ಸಾರ್ವಜನಿಕ ದೂರುಗಳು ಹಾಗೂ ನೆಲಮಂಗಲ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಬೆಂಗಳೂರು–ತುಮಕೂರು ಮತ್ತು ಬೆಂಗಳೂರು–ಹಾಸನ ಮಾರ್ಗಗಳಲ್ಲಿ ಪ್ರತ್ಯೇಕವಾಗಿ ಕಾರ್ಯಾಚರಣೆಯಾಗುತ್ತಿರುವ ವೇಗದೂತ ಸಾರಿಗೆಗಳ ಪೈಕಿ ನಿಲುಗಡೆರಹಿತ/ನಿರ್ವಾಹಕರಹಿತ ಅನುಸೂಚಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ವೇಗದೂತ

ಅನುಸೂಚಿಗಳನ್ನು ಸಂಪೂರ್ಣವಾಗಿ ಸರ್ವಿಸ್ ರಸ್ತೆಯ ಮುಖಾಂತರ ಕಾರ್ಯಾಚರಣೆ ಮಾಡಲು ವಿಭಾಗೀಯ ನಿಯಂತ್ರಣಾಧಿಕಾರಿಗಳು, ತುಮಕೂರು/ಹಾಸನ ರವರಿಗೆ ಸೂಚಿಸಲಾಗಿದೆ.

ಸದರಿ ಸಾರಿಗೆಗಳು ಒಂದು ವೇಳೆ ಟೋಲ್ ಮುಖಾಂತರ ಕಾರ್ಯಾಚರಣೆ ಮಾಡಿದಲ್ಲಿ ಸದರಿ ಸಾರಿಗೆಯಲ್ಲಿ ಕರ್ತವ್ಯ ನಿರ್ವಹಿಸುವ ಚಾಲನಾ ಸಿಬ್ಬಂದಿಗಳಿಗೆ ಯಾವುದೇ ಕಾರಣಕ್ಕೂ ಬಳಕೆದಾರ ಶುಲ್ಕವನ್ನು ನೀಡಬಾರದು ಎಂದು ಸಹ ಆದೇಶಿಸಲಾಗಿದೆ. ಸಂಪೂರ್ಣವಾಗಿ ಸರ್ವಿಸ್ ರಸ್ತೆಯ ಮುಖಾಂತರ ಆಚರಣೆ ಮಾಡುವ ಸಾರಿಗೆಗಳ ಮಾರ್ಗಫಲಕಗಳಲ್ಲಿ ವಯಾ ಸರ್ವಿಸ್ ರಸ್ತೆ ಎಂದು ಬರೆಸಲು ಸೂಚಿಸಲಾಗಿದೆ.

ಈ ಬಗ್ಗೆ ಸಮೀಕ್ಷೆ ನಡೆಸಿದ್ದು, ಸಮೀಕ್ಷೆ ಪ್ರಕಾರ ಈ ಮಾರ್ಗದಲ್ಲಿ ಬೆಳಿಗ್ಗೆ 6.00 ರಿಂದ 22.00 ಗಂಟೆಗೆ 565 ಟ್ರಿಪ್‌ಗಳು ಆಚರಣೆಯಲ್ಲಿದ್ದು, 363 (ಶೇ 65ರಷ್ಟು) ಟ್ರಿಪ್‌ಗಳು ಸರ್ವಿಸ್ ರಸ್ತೆಯ ಮೂಲಕ ಆಚರಣೆ ಮಾಡಿದ್ದು, 202 (ಶೇ 35ರಷ್ಟು) ಟ್ರಿಪ್‌ಗಳು ಮಾತ್ರ ಮೇಲು ಸೇತುವೆ ಮೂಲಕ ಆಚರಣೆಯಾಗಿರುತ್ತವೆ. ಶೇ 65ರಷ್ಟು ಸಾರಿಗೆಗಳು ಸರ್ವಿಸ್ ರಸ್ತೆಯ ಮೂಲಕ ಕಾರ್ಯಾಚರಣೆಯಲ್ಲಿದ್ದು, ಇವುಗಳ ಸದುಪಯೋಗವನ್ನು ನೆಲಮಂಗಲ ಮತ್ತು ಸುತ್ತಮುತ್ತಲಿನ ಸಾರ್ವಜನಿಕ ಪ್ರಯಾಣಿಕರು ಪಡೆದುಕೊಳ್ಳುತ್ತಿರುತ್ತಾರೆ.

ಬೆಂಗಳೂರು–ತುಮಕೂರು ಮತ್ತು ಬೆಂಗಳೂರು–ಹೊಸದುರ್ಗ ಮಾರ್ಗದಲ್ಲಿ ಕಾರ್ಯಾಚರಣೆ ಮಾಡುತ್ತಿರುವ ನಿರ್ವಾಹಕ ಸಹಿತ ಎಲ್ಲಾ ವಾಹನಗಳು ದಾಬಸ್‌ಪೇಟೆ ಬಸ್ ನಿಲ್ದಾಣಕ್ಕೆ ಹೋಗಿ ಸಂಚಾರ ನಿಯಂತ್ರಕರಿಂದ ಎಂಟ್ರಿ ಪಡೆದು ಹೋಗುವಂತೆ ಆದೇಶ ನೀಡಲಾಗಿದೆ. ಅಲ್ಲದೇ ಬೆಂಗಳೂರು–ಪಾವಗಡ ಮಾರ್ಗದ ಎಲ್ಲಾ ವೇಗದೂತ ಮತ್ತು ಸಾಮಾನ್ಯ ಸಾರಿಗೆ ವಾಹನಗಳು ದಾಬಸ್‌ಪೇಟೆ ಬಸ್ ನಿಲ್ದಾಣದ

ಮೂಲಕ ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಸಾರಿಗೆಗಳ ಸದುಪಯೋಗವನ್ನು ಈ ಭಾಗದ ಸಾರ್ವಜನಿಕರು ಪಡೆದುಕೊಳ್ಳುತ್ತಿದ್ದಾರೆ.

ಈ) ಮೇಲೆ ತಿಳಿಸಿದಂತೆ ನೆಲಮಂಗಲ ಮತ್ತು ದಾಬಸ್‌ಪೇಟೆ ಸುತ್ತಮುತ್ತಲಿನ ಪ್ರಯಾಣಿಕರ ಅನುಕೂಲಕ್ಕಾಗಿ ವಾಹನಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ನೆಲಮಂಗಲ ಮತ್ತು ದಾಬಸ್‌ಪೇಟೆ ಮಾರ್ಗವಾಗಿ ದೂರ ಮಾರ್ಗದ ಸಾರಿಗೆಗಳು ಕಾರ್ಯಾಚರಣೆಯಲ್ಲಿದ್ದು, ಈ ಎಲ್ಲಾ ವಾಹನಗಳನ್ನು ಸರ್ವಿಸ್ ರಸ್ತೆ ಮೂಲಕ ಆಚರಣೆ ಮಾಡಿದ್ದಲ್ಲಿ ಹೆಚ್ಚು ಪ್ರಯಾಣ ಸಮಯ ತೆಗೆದುಕೊಳ್ಳುತ್ತದೆ ಹಾಗೂ ನೇರ ಪ್ರಯಾಣಿಕರ ಹಿತದೃಷ್ಟಿಯಿಂದ ಎಲ್ಲಾ ವಾಹನಗಳನ್ನು ಸರ್ವಿಸ್ ರಸ್ತೆ ಮೂಲಕ ಸಂಚರಿಸುವುದು ಕಷ್ಟಸಾಧ್ಯ.

ಎಸ್.ಸಿ.ಪಿ./ಟಿ.ಎಸ್.ಪಿ. ಕಾಮಗಾರಿಗಳು

521(1121); ಡಾ॥ ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ಕಳೆದ 2 ವರ್ಷಗಳಿಂದ ಸಮಾಜ ಕಲ್ಯಾಣ ಇಲಾಖೆಯಿಂದ ಎಸ್.ಸಿ.ಪಿ/ಟಿ.ಎಸ್.ಪಿ. ರಸ್ತೆ ಕಾಮಗಾರಿಗಳಿಗೆ ಬಿಡುಗಡೆಯಾದ ಹಣವೆಷ್ಟು (ಈ ಕಾಮಗಾರಿಗಳ ಸಂಪೂರ್ಣ ವಿವರವನ್ನು ನೀಡುವುದು);

ಆ) ಈ ಅವಧಿಯಲ್ಲಿ ನೆಲಮಂಗಲ ವಿಧಾನಸಭಾ ಕ್ಷೇತ್ರದ ಯಾವ ಯಾವ ಹಳ್ಳಿಗಳಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು);

ಇ) 2015–16ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ನೆಲಮಂಗಲ ವಿಧಾನಸಭಾ ಕ್ಷೇತ್ರಕ್ಕೆ ಯಾವ ರೀತಿಯ ಸೌಲಭ್ಯ ದೊರೆಯುವುದು ಮತ್ತು ಯಾವಾಗ ಅನುದಾನ ಬಿಡುಗಡೆ ಮಾಡಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು);